# ಸರ್ಕಾರಿ ಪ್ರೌಢಶಾಲೆ, ಶೇಷೇನಹಳ್ಳಿ, ಗುಬ್ಬಿ ತಾಲ್ಲೂಕು, ತುಮಕೂರು(ದ) ಜಿಲ್ಲೆ

## ಸಂಕಲನಾತ್ಮಕ ಮೌಲ್ಯಮಾಪನ – 01

## 8ನೇ ತರಗತಿ ವಿಜ್ಞಾನ – SA-1 ರ ನೀಲ ನಕಾಶೆ

**ಉದ್ದಿಷ್ಟವಾರು ಕೋಷ್ಟಕ**

| ಕ್ರ.ಸ | ಉದ್ದಿಷ್ಟಗಳು | ಪ್ರಶ್ನೆಗಳ ಸಂಖ್ಯೆ | ಅಂಕ | ಶೇ |
|---|---|---|---|---|
| 1 | ಜ್ಞಾನ | 7 | 8 | 20% |
| 2 | ತಿಳುವಳಿಕೆ | 5 | 16 | 40% |
| 3 | ಅನ್ವಯ | 4 | 8 | 20% |
| 4 | ಕೌಶಲ್ಯ | 3 | 6<br>2 | 15%<br>5% |
| ಒಟ್ಟು | | 19 | 40 | 100% |

**ಪ್ರಶ್ನಾವಾರು ಕೋಷ್ಟಕ**

| ಕ್ರ.ಸಂ | ಪ್ರಶ್ನೆಗಳ ವಿಧ | ಪ್ರಶ್ನೆಗಳ ಸಂಖ್ಯೆ | ಅಂಕ | ಶೇ |
|---|---|---|---|---|
| 1 | ಬಹು ಆಯ್ಕೆ | 04 | 4 | 10% |
| 2 | 1 ಅಂಕ | 04 | 4 | 10% |
| 3 | 2 ಅಂಕ | 05 | 10 | 25% |
| 4 | 3 ಅಂಕ | 03 | 9 | 22.5% |
| 5 | 4 ಅಂಕ | 02 | 8 | 20% |
| 6 | 5 ಅಂಕ | 01 | 5 | 12.5% |
| ಒಟ್ಟು | | 19 | 40 | 100% |

**ಪ್ರಶ್ನೆ ಕ್ಲಿಷ್ಟತೆಮಟ್ಟ ಆಧಾರಿತ ಕೋಷ್ಟಕ**

| ಕ್ರ.ಸಂ | ಕ್ಲಿಷ್ಟತೆ ಮಟ್ಟ | ಅಂಕ | ಶೇ |
|---|---|---|---|
| 1 | ಅತಿ ಸುಲಭ | 12 | 30% |
| 2 | ಸುಲಭ | 20 | 50% |
| 3 | ಕ್ಲಿಷ್ಟ | 8 | 20% |
| ಒಟ್ಟು | | 40 | 100% |

| ಕ್ರ ಸಂ | ಮುಖ್ಯಾಂಶಗಳು | ಅಧ್ಯಾಯಗಳು | ಒಟ್ಟು ಅಂಕಗಳು |
|---|---|---|---|
| 1 | ಭೌತ ವಿಜ್ಞಾನ | ಅಧ್ಯಾಯ : 8. ಬಲ ಮತ್ತು ಒತ್ತಡ<br>ಅಧ್ಯಾಯ : 9. ಘರ್ಷಣೆ | 14 |
| 2 | ರಾಸಾಯನ ವಿಜ್ಞಾನ | ಅಧ್ಯಾಯ : 3. ಕಲ್ಲಿದ್ದಲು ಮತ್ತು ಪೆಟ್ರೋಲಿಯಂ<br>ಅಧ್ಯಾಯ : 4. ದಹನ ಮತ್ತು ಜ್ವಾಲೆ | 13 |
| 3 | ಜೀವ ವಿಜ್ಞಾನ | ಅಧ್ಯಾಯ : 1. ಬೆಳೆಯ ಉತ್ಪಾದನೆ ಮತ್ತು ನಿರ್ವಹಣೆ<br>ಅಧ್ಯಾಯ : 2. ಸೂಕ್ಷ್ಮಜೀವಿಗಳು : ಮಿತ್ರ ಮತ್ತು ಶತ್ರು | 13 |
| ಒಟ್ಟು ಅಂಕಗಳು | | | 40 |

# ಸರ್ಕಾರಿ ಪ್ರೌಢಶಾಲೆ, ಶೇಷೇನಹಳ್ಳಿ, ಗುಬ್ಬಿ ತಾಲ್ಲೂಕು, ತುಮಕೂರು (ದ) ಜಿಲ್ಲೆ

## 8ನೇ ತರಗತಿ ವಿಜ್ಞಾನ ವಿಷಯದ SA-1 ಪರೀಕ್ಷೆಯ ನೀಲ ನಕ್ಷೆ – ಸೆಪ್ಟಂಬರ್, 2024

| ಕ್ರ. ಸಂ | ಉದ್ದಿಷ್ಟಗಳು | ಜ್ಞಾನ | | | | | | ತಿಳುವಳಿಕೆ | | | | | | ಅನ್ವಯ | | | | | | ಕೌಶಲ | | | | | | ಒಟ್ಟು | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | ಘಟಕಗಳು | MCQ (1M) | VSA (1M) | SA (2M) | $LA_1$ (3M) | $LA_2$ (4M) | $LA_3$ (5M) | MCQ (1M) | VSA (1M) | SA (2M) | $LA_1$ (3M) | $LA_2$ (4M) | $LA_3$ (5M) | MCQ (1M) | VSA (1M) | SA (2M) | $LA_1$ (3M) | $LA_2$ (4M) | $LA_3$ (5M) | MCQ (1M) | VSA (1M) | SA (2M) | $LA_1$ (3M) | $LA_2$ (4M) | $LA_3$ (5M) | ಪ್ರ.ಸಂ | ಅಂಕ |
| 1 | 1. ಬೆಳೆಯ ಉತ್ಪಾದನೆ ಮತ್ತು ನಿರ್ವಹಣೆ | | 1(1) | | | | | | | 2(1) | | | | | | | | | | | | | 3(1) | | | 03 | 06 |
| 2 | 2. ಸೂಕ್ಷ್ಮಜೀವಿಗಳು : ಮಿತ್ರ ಮತ್ತು ಶತ್ರು | 1(1) | | | | | | | | | | 4(1) | | | | 2(1) | | | | | | | | | | 03 | 07 |
| 3 | 3. ಕಲ್ಲಿದ್ದಲು ಮತ್ತು ಪೆಟ್ರೋಲಿಯಂ | | | 2(1) | | | | 1(1) | | | | 4(1) | | | | | | | | | | | | | | 03 | 07 |
| 4 | 4. ದಹನ ಮತ್ತು ಜ್ವಾಲೆ | | 1(1) | | | | | | | | | | | | | 2(1) | | | | | | | 3(1) | | | 03 | 06 |
| 5 | 8. ಬಲ ಮತ್ತು ಒತ್ತಡ | 1(1) | | | | | | | | | | | 5(1) | | 1(1) | | | | | | | | | | | 03 | 07 |
| 6 | 9. ಘರ್ಷಣೆ | 1(1) | 1(1) | | | | | | | | | | | | | | 3(1) | | | | | 2(1) | | | | 04 | 07 |
| ಒಟ್ಟು | | 3(3) | 3(3) | 2(1) | | | | 1(1) | | 2(1) | | 8(2) | 5(1) | | 1(1) | 4(2) | 3(1) | | | | | 2(1) | 6(2) | | | 19 | 40 |
| ಒಟ್ಟು | | 8(7) | | | | | | 16(5) | | | | | | 8(4) | | | | | | 8(3) | | | | | | 19/40 | |

# ಸರ್ಕಾರಿ ಪ್ರೌಢಶಾಲೆ, ಶೇಷೇನಹಳ್ಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ

## ಸಂಕಲನಾತ್ಮಕ ಮೌಲ್ಯಮಾಪನ – 01

### – : ಪ್ರಶ್ನೆ ಪತ್ರಿಕೆ : –

ವಿಷಯ : ವಿಜ್ಞಾನ ಸಮಯ : 1 ಗಂಟೆ 30 ನಿಮಿಷ

ಅಂಕಗಳು : 40 ತರಗತಿ : 8ನೇ ತರಗತಿ

### –: ಭೌತ ವಿಜ್ಞಾನ :–

**I.** ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆ ನೀಡಲಾಗಿದೆ. ಸರಿಯಾದ ಉತ್ತರ ಆರಿಸಿ ಬರೆಯಿರಿ. 2 X 1 = 2

1. ಇವುಗಳಲ್ಲಿ ಸಂಪರ್ಕ ಬಲ

(ಎ) ಗುರುತ್ವಾಕರ್ಷಣೆ ಬಲ (ಬಿ) ಘರ್ಷಣೆ ಬಲ (ಸಿ) ಕಾಂತೀಯ ಬಲ (ಡಿ) ಸ್ಥಾಯಿವಿದ್ಯುತ್ ಬಲ

2. ತರಲಗಳು ಎಂದರೆ

(ಎ) ದ್ರವಗಳು (ಬಿ) ಅನಿಲಗಳು (ಸಿ) ದ್ರವಗಳು ಮತ್ತು ಅನಿಲಗಳು (ಡಿ) ಯಾವುದೂ ಅಲ್ಲ

**II.** ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. 2 X 1 = 2

3. ಮಾರ್ದ್ರಕಗಳು ಎಂದರೇನು?
4. ಗಾಳಿ ತುಂಬಿದ ಬಲೂನನ್ನು ಸಿಂಥೆಟಿಕ್ ಬಟ್ಟೆಯ ಚೂರಿನಿಂದ ಉಜ್ಜಿದ ನಂತರ ಗೋಡೆಗೆ ಒತ್ತಲಾಯಿತು. ಬಲೂನ್ ಗೋಡೆಗೆ ಅಂಟಿಕೊಳ್ಳುವುದು ಕಂಡು ಬಂತು. ಬಲೂನ್ ಮತ್ತು ಗೋಡೆಯ ನಡುವಿನ ಆಕರ್ಷಣೆಗೆ ಕಾರಣವಾದ ಬಲ ಯಾವುದು?

**III.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. 1 X 2 = 2



5. ಕೊಟ್ಟಿರುವ ಚಿತ್ರ ಗಮನಿಸಿ. ವ್ಯಕ್ತಿಯು ಒಂದು ಮರದ ಪೆಟ್ಟಿಗೆ ಮೇಲೆ ಬಲ ಪ್ರಯೋಗ ಮಾಡುತ್ತಿದ್ದಾನೆ. ಅವನಿಗೆ ನಿಶ್ಚಲವಾಗಿರುವ ಪೆಟ್ಟಿಗೆಯನ್ನು ಚಲಿಸುವಂತೆ ಮಾಡುವುದು ಅಥವಾ ಈಗಾಗಲೇ ಚಲನೆಯಲ್ಲಿರುವುದನ್ನು ಮತ್ತಷ್ಟು ಚಲಿಸುವಂತೆ ಮಾಡುವುದು, ಇವುಗಳಲ್ಲಿ ಯಾವುದು ಸುಲಭ? ಏಕೆ? ಕಾರಣ ಕೊಡಿ.

ಅಥವಾ



ಬೆಂಕಿಕಡ್ಡಿಯನ್ನು ಬೆಂಕಿಪೆಟ್ಟಿಗೆಯ ಬದಿಯ ಮೇಲ್ಮೈ ಮೇಲೆ ಗೀಚಿದಾಗ ಬೆಂಕಿ ಹೊತ್ತಿಕೊಳ್ಳುತ್ತದೆ. ಏಕೆ? ಕಾರಣ ಕೊಡಿ.

**IV.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. 3 X 1 = 3

6. ನೀವು ಬಕೆಟ್ಟಿನಲ್ಲಿರುವ ಸೋಪಿನ ನೀರನ್ನು ಅಮೃತಶಿಲೆಯ ನೆಲದ ಮೇಲೆ ಆಕಸ್ಮಿಕವಾಗಿ ಚೆಲ್ಲಿದ್ದೀರಿ. ಆಗ ಅದರ ಮೇಲೆ ನಡೆಯಲು ನಿಮಗೆ ಸುಲಭವಾಗುತ್ತದೆಯೇ ಅಥವಾ ಕಷ್ಟವಾಗುತ್ತದೆಯೇ? ಏಕೆ? ತಿಳಿಸಿ.

**V.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. 5 X 1 = 5

7. (ಎ) ಬಲ ಎಂದರೇನು?

(ಬಿ) ಬಲದ ಪರಿಣಾಮಗಳನ್ನು ತಿಳಿಸಿ.

(ಸಿ) ಹೆಗಲಿಗೆ ಹಾಕುವ ಬ್ಯಾಗ್‌ಗೆ ತೆಳುವಾದ ಪಟ್ಟಿಯ ಬದಲು ಅಗಲವಾದ ಪಟ್ಟಿಯನ್ನು ಹಾಕಿರುತ್ತಾರೆ. ಏಕೆ? ಕಾರಣ ಕೊಡಿ

### –: ರಾಸಾಯನ ವಿಜ್ಞಾನ :–

**VI.** ಈ ಕೆಳಗಿನ ಪ್ರಶ್ನೆಗೆ ನಾಲ್ಕು ಆಯ್ಕೆ ನೀಡಲಾಗಿದೆ. ಸರಿಯಾದ ಉತ್ತರ ಆರಿಸಿ ಬರೆಯಿರಿ. 1 X 1 = 1

8. ಕಲ್ಲಿದ್ದಲನ್ನು ಕೈಗಾರಿಕೆಗಳಲ್ಲಿ ಸಂಸ್ಕರಿಸಿದಾಗ, ದೊರೆಯುವ ಉಪಯುಕ್ತ ಉತ್ಪನ್ನಗಳು

(ಎ) ಕೋಕ್ (ಬಿ) ಕಲ್ಲಿದ್ದಲು ಡಾಂಬರು (ಸಿ) ಕಲ್ಲಿದ್ದಲು ಅನಿಲ (ಡಿ) ಮೇಲಿನ ಎಲ್ಲವೂ

**VII.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. 1 X 1 = 1

9. ಜ್ವಲನ ತಾಪ ಎಂದರೇನು?

**VIII.** ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. **2 X 2 = 4**

10. ಇತ್ತೀಚೆಗೆ ಹೆಚ್ಚುತ್ತಿರುವ ಇಂಧನಗಳ ಬಳಕೆಯು ಪರಿಸರದ ಮೇಲೆ ದುಷ್ಪರಿಣಾಮಗಳನ್ನು ಉಂಟು ಮಾಡುತ್ತಿದೆ. ಈ ಹೇಳಿಕೆಯನ್ನು ಸಮರ್ಥಿಸಿ.

11. CNG ಮತ್ತು LPG ಗಳನ್ನು ಇಂಧನಗಳಾಗಿ ಬಳಸುವುದರ ಅನುಕೂಲಗಳೇನು?

ಅಥವಾ

ವಾಹನ ಚಲಾಯಿಸುವಾಗ ಪೆಟ್ರೋಲ್ ಮತ್ತು ಡೀಸಲ್ ಹೇಗೆ ಉಳಿಸಬೇಕೆನ್ನುವುದರ ಕುರಿತು ನೀಡುವ ಸಲಹೆ ಯಾವುವು?

**IX.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. **3 X 1 = 3**

12. ಮೇಣದ ಬತ್ತಿಯ ಜ್ವಾಲೆಯ ವಿವಿಧ ವಲಯಗಳನ್ನು ತೋರಿಸುವ ಚಿತ್ರ ಬರೆದು, ಈ ಕೆಳಗಿನ ಭಾಗಗಳನ್ನು ಗುರುತಿಸಿ.

(ಎ) ಅತ್ಯಂತ ಬಿಸಿ ಭಾಗ (ಬಿ) ಅತಿ ಕಡಿಮೆ ಬಿಸಿ ಭಾಗ

**X.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. **4 X 1 = 4**

13. ಕಲ್ಲಿದ್ದಲು ಹೇಗೆ ಉಂಟಾಗುತ್ತದೆ? ತಿಳಿಸಿ.

ಅಥವಾ

ಪೆಟ್ರೋಲಿಯಂ ಹೇಗೆ ಉಂಟಾಗುತ್ತದೆ? ವಿವರಿಸಿ

## –: ಜೀವ ವಿಜ್ಞಾನ :–

**XI.** ಈ ಕೆಳಗಿನ ಪ್ರಶ್ನೆಗೆ ನಾಲ್ಕು ಆಯ್ಕೆ ನೀಡಲಾಗಿದೆ. ಸರಿಯಾದ ಉತ್ತರ ಆರಿಸಿ ಬರೆಯಿರಿ. **1 X 1 = 1**

14. ಸಕ್ಕರೆಯನ್ನು ಆಲ್ಕೋಹಾಲ್ ಆಗಿ ಪರಿವರ್ತಿಸುವ ಕ್ರಿಯೆ

(ಎ) ಪಾಶ್ಚರೀಕರಣ (ಬಿ) ಪ್ರತಿರಕ್ಷಣೆ (ಸಿ) ಹುದುಗುವಿಕೆ (ಡಿ) ಪ್ರತಿಜೈವಿಕಗಳು

**XII.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿರಿ. **1 X 1 = 1**

15. ಕಳೆಗಳು ಎಂದರೇನು?

**XIII.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. **2 X 2 = 4**

16. ಸಾವಯವ ಗೊಬ್ಬರದ ಅನುಕೂಲತೆಗಳನ್ನು ತಿಳಿಸಿ.

ಅಥವಾ

ಕೃಷಿ ಪದ್ಧತಿಯ ಹಂತಗಳನ್ನು ತಿಳಿಸಿ.

17. ವ್ಯಕ್ತಿಯೊಬ್ಬ ಸಂಪರ್ಕದಿಂದ ಹರಡುವ ರೋಗವೊಂದರಿಂದ ಬಳಲುತ್ತಿದ್ದಾನೆ. ಸೋಂಕಿತ ವ್ಯಕ್ತಿಯಿಂದ ಆರೋಗ್ಯವಂತ ವ್ಯಕ್ತಿಗೆ ಆ ರೋಗ ಹರಡದಂತೆ ತಡೆಗಟ್ಟಲು ಅನುಸರಿಸುವ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿ.

**XIV.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. **3 X 1 = 3**

18. ಎಡೆಕುಂಟೆಯ ಚಿತ್ರ ಬರೆದು, ಈ ಕೆಳಗಿನ ಭಾಗಗಳನ್ನು ಗುರುತಿಸಿ.

(ಎ) ನೊಗ (ಬಿ) ಬಾಗಿದ ತಟ್ಟೆ

**XV.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. **4 X 1 = 4**

19. (ಎ) ನಮ್ಮ ಜೀವನದಲ್ಲಿ, ಸೂಕ್ಷ್ಮಜೀವಿಗಳ ನಾಲ್ಕು ಉಪಯೋಗಗಳನ್ನು ತಿಳಿಸಿ.

(ಬಿ) ಸೂಕ್ಷ್ಮಜೀವಿಗಳಿಂದ ಉಂಟಾಗುವ ನಾಲ್ಕು ಹಾನಿಗಳನ್ನು ತಿಳಿಸಿ.

**ALL THE BEST**

# ಸರ್ಕಾರಿ ಪ್ರೌಢಶಾಲೆ, ಶೇಷೇನಹಳ್ಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ

## ಸಂಕಲನಾತ್ಮಕ ಮೌಲ್ಯಮಾಪನ – 01
## – : ಮಾದರಿ ಉತ್ತರಗಳು : –

ವಿಷಯ : ವಿಜ್ಞಾನ ಅಂಕಗಳು : 40

ತರಗತಿ : 8ನೇ ತರಗತಿ ದಿನಾಂಕ : –09–2024

### –: ಭೌತ ವಿಜ್ಞಾನ :–

**I.** ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆ ನೀಡಲಾಗಿದೆ. ಸರಿಯಾದ ಉತ್ತರ ಆರಿಸಿ ಬರೆಯಿರಿ. **1 X 1 = 1**

1. ಇವುಗಳಲ್ಲಿ ಸಂಪರ್ಕ ಬಲ

(ಎ) ಗುರುತ್ವಾಕರ್ಷಣೆ ಬಲ (ಬಿ) ಘರ್ಷಣೆ ಬಲ (ಸಿ) ಕಾಂತೀಯ ಬಲ (ಡಿ) ಸ್ಥಾಯಿವಿದ್ಯುತ್ ಬಲ

ಉತ್ತರ : (ಬಿ) ಘರ್ಷಣೆ ಬಲ

2. ತರಲಗಳು ಎಂದರೆ

(ಎ) ದ್ರವಗಳು (ಬಿ) ಅನಿಲಗಳು (ಸಿ) ದ್ರವಗಳು ಮತ್ತು ಅನಿಲಗಳು (ಡಿ) ಯಾವುದೂ ಅಲ್ಲ

ಉತ್ತರ : (ಸಿ) ದ್ರವಗಳು ಮತ್ತು ಅನಿಲಗಳು

**II.** ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. **2 X 1 = 2**

3. ಮಾರ್ದ್ರಕಗಳು ಎಂದರೇನು?

ಘರ್ಷಣೆಯನ್ನು ಕಡಿತಗೊಳಿಸುವ ಪದಾರ್ಥಗಳನ್ನು ಮಾರ್ದ್ರಕಗಳೆಂದು ಕರೆಯುತ್ತಾರೆ.

4. ಗಾಳಿ ತುಂಬಿದ ಬಲೂನನ್ನು ಸಿಂಥೆಟಿಕ್ ಬಟ್ಟೆಯ ಚೂರಿನಿಂದ ಉಜ್ಜಿದ ನಂತರ ಗೋಡೆಗೆ ಒತ್ತಲಾಯಿತು. ಬಲೂನ್ ಗೋಡೆಗೆ ಅಂಟಿಕೊಳ್ಳುವುದು ಕಂಡು ಬಂತು. ಬಲೂನ್ ಮತ್ತು ಗೋಡೆಯ ನಡುವಿನ ಆಕರ್ಷಣೆಗೆ ಕಾರಣವಾದ ಬಲ ಯಾವುದು?

ಸ್ಥಾಯಿವಿದ್ಯುತ್ ಬಲ

**III.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. **1 X 2 = 2**

5. ಕೊಟ್ಟಿರುವ ಚಿತ್ರ ಗಮನಿಸಿ. ವ್ಯಕ್ತಿಯು ಒಂದು ಮರದ ಪೆಟ್ಟಿಗೆ ಮೇಲೆ ಬಲ ಪ್ರಯೋಗ ಮಾಡುತ್ತಿದ್ದಾನೆ. ಅವನಿಗೆ ನಿಶ್ಚಲವಾಗಿರುವ ಪೆಟ್ಟಿಗೆಯನ್ನು ಚಲಿಸುವಂತೆ ಮಾಡುವುದು ಅಥವಾ ಈಗಾಗಲೇ ಚಲನೆಯಲ್ಲಿರುವುದನ್ನು ಮತ್ತಷ್ಟು ಚಲಿಸುವಂತೆ ಮಾಡುವುದು, ಇವುಗಳಲ್ಲಿ ಯಾವುದು ಸುಲಭ? ಏಕೆ? ಕಾರಣ ಕೊಡಿ.



ನಿಶ್ಚಲ ಸ್ಥಿತಿಯಲ್ಲಿರುವ ಕಾಯವೊಂದು ಆ ಕ್ಷಣದಲ್ಲಿ ಚಲಿಸಲಾರಂಭಿಸಲು ಬೇಕಾದ ಬಲವನ್ನು ಸ್ಥಾಯಿ ಘರ್ಷಣೆ ಎನ್ನುವರು. ಸ್ಥಿರಜವದಲ್ಲಿ ಚಲಿಸುತ್ತಿರುವ ಕಾಯವೊಂದು ಅದೇ ಜವದಲ್ಲಿ ಚಲಿಸುವಂತೆ ಮಾಡಲು ಅಗತ್ಯವಾದ ಬಲವನ್ನು ಜಾರು ಸ್ಥಾಯಿ ಘರ್ಷಣೆ ಎನ್ನುವರು. ಜಾರು ಘರ್ಷಣೆಯು ಸ್ಥಾಯಿ ಘರ್ಷಣೆಗಿಂತ ಕಡಿಮೆ ಇರುತ್ತದೆ ಮತ್ತು ಪೆಟ್ಟಿಗೆಯನ್ನು ಚಲಿಸುವಂತೆ ಮಾಡುವುದಕ್ಕಿಂತ ಚಲನೆಯಲ್ಲಿರುವ ಪೆಟ್ಟಿಗೆಯನ್ನು ಚಲನೆಯಲ್ಲಿಯೇ ಇರಿಸುವುದು ಸುಲಭವಾಗುತ್ತದೆ.

ಅಥವಾ

ಬೆಂಕಿಕಡ್ಡಿಯನ್ನು ಬೆಂಕಿಪೆಟ್ಟಿಗೆಯ ಬದಿಯ ಮೇಲ್ಮೈ ಮೇಲೆ ಗೀಚಿದಾಗ ಬೆಂಕಿ ಹೊತ್ತಿಕೊಳ್ಳುತ್ತದೆ. ಏಕೆ? ಕಾರಣ ಕೊಡಿ.



ಬೆಂಕಿಕಡ್ಡಿಯನ್ನು ಬೆಂಕಿಪೆಟ್ಟಿಗೆಯ ಒರಟು ಮೇಲ್ಮೈ ಹೊಂದಿರುತ್ತದೆ.
ಬೆಂಕಿಕಡ್ಡಿಯನ್ನು ಬೆಂಕಿಪೆಟ್ಟಿಗೆಯ ಬದಿಯ ಮೇಲ್ಮೈ ಮೇಲೆ ಗೀಚಿದಾಗ ಘರ್ಷಣೆಯಿಂದ ಉಷ್ಣ ಹೆಚ್ಚಾಗುತ್ತದೆ ಮತ್ತು ಬೆಂಕಿ ಹೊತ್ತಿಕೊಳ್ಳುತ್ತದೆ.

**IV.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. **3 X 1 = 3**

6. ನೀವು ಬಕೆಟ್ಟಿನಲ್ಲಿರುವ ಸೋಪಿನ ನೀರನ್ನು ಅಮೃತಶಿಲೆಯ ನೆಲದ ಮೇಲೆ ಆಕಸ್ಮಿಕವಾಗಿ ಚೆಲ್ಲಿದ್ದೀರಿ. ಆಗ ಅದರ ಮೇಲೆ ನಡೆಯಲು ನಿಮಗೆ ಸುಲಭವಾಗುತ್ತದೆಯೇ ಅಥವಾ ಕಷ್ಟವಾಗುತ್ತದೆಯೇ? ಏಕೆ? ತಿಳಿಸಿ.

ಕಷ್ಟವಾಗುತ್ತದೆ. ನುಣುಪಾಗಿರುವಂತೆ ತೋರುವ ಅಮೃತಶಿಲೆಯ ಮೇಲ್ಮೈಗಳಲ್ಲಿಯೂ ಅಸಂಖ್ಯಾತ ಸೂಕ್ಷ್ಮವಾದ ಅನಿಯತೆಗಳು ಇರುತ್ತವೆ. ಸೋಪಿನ ನೀರು ಅಮೃತಶಿಲೆಯ ನೆಲದ ಅನಿಯತಗಳ ನಡುವೆ ಸೇರಿ, ನಯವಾದ ಮೇಲ್ಮೈ ಉಂಟು ಮಾಡುತ್ತದೆ. ಘರ್ಷಣಾ ಬಲ ಕಡಿಮೆಯಾಗುತ್ತದೆ ಮತ್ತು ಜಾರಿ ಬೀಳುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ.

**V.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. **5 X 1 = 5**

**7.** (ಎ) ಬಲ ಎಂದರೇನು?

ವಸ್ತುವಿನ ತಳ್ಳುವಿಕೆ ಅಥವಾ ಎಳೆಯುವಿಕೆಯನ್ನು ಬಲ ಎನ್ನುತ್ತೇವೆ.

(ಬಿ) ಬಲದ ಪರಿಣಾಮಗಳನ್ನು ತಿಳಿಸಿ.

ನಿಶ್ಚಲ ಸ್ಥಿತಿಯಿಂದ ವಸ್ತುವನ್ನು ಚಲಿಸುವಂತೆ ಮಾಡಬಹುದು.

ಚಲಿಸುತ್ತಿದ್ದರೆ, ವಸ್ತುಗಳ ಜವವನ್ನು ಬದಲಾಯಿಸಬಹುದು.

ವಸ್ತುವಿನ ಚಲನೆಯ ದಿಕ್ಕನ್ನು ಬದಲಾಯಿಸಬಹುದು.

ವಸ್ತುವಿನ ಆಕಾರದಲ್ಲಿ ಬದಲಾವಣೆಯನ್ನು ತರಬಹುದು.

(ಸಿ) ಹೆಗಲಿಗೆ ಹಾಕುವ ಬ್ಯಾಗ್‌ಗೆ ತೆಳುವಾದ ಪಟ್ಟಿಯ ಬದಲು ಅಗಲವಾದ ಪಟ್ಟಿಯನ್ನು ಹಾಕಿರುತ್ತಾರೆ. ಏಕೆ? ಕಾರಣ ಕೊಡಿ

ಬ್ಯಾಗ್‌ಗೆ ಅಗಲವಾದ ಪಟ್ಟಿಯನ್ನು ಹಾಕುವುದರಿಂದ ಬಲ ಪ್ರಯೋಗ ಆಗುವ ವಿಸ್ತೀರ್ಣ ಹೆಚ್ಚಾಗುತ್ತದೆ. ಆದ್ದರಿಂದ ಒತ್ತಡ ಕಡಿಮೆಯಾಗುತ್ತದೆ ಮತ್ತು ಬ್ಯಾಗ್‌ನ ಭಾರವನ್ನು ಹೊತ್ತು ಸಾಗಲು ಸುಲಭವಾಗುತ್ತದೆ.

## –: ರಾಸಾಯನ ವಿಜ್ಞಾನ :–

**VI.** ಈ ಕೆಳಗಿನ ಪ್ರಶ್ನೆಗೆ ನಾಲ್ಕು ಆಯ್ಕೆ ನೀಡಲಾಗಿದೆ. ಸರಿಯಾದ ಉತ್ತರ ಆರಿಸಿ ಬರೆಯಿರಿ. **1 X 1 = 1**

**8.** ಕಲ್ಲಿದ್ದಲನ್ನು ಕೈಗಾರಿಕೆಗಳಲ್ಲಿ ಸಂಸ್ಕರಿಸಿದಾಗ, ದೊರೆಯುವ ಉಪಯುಕ್ತ ಉತ್ಪನ್ನಗಳು

(ಎ) ಕೋಕ್ (ಬಿ) ಕಲ್ಲಿದ್ದಲು ಡಾಂಬರು (ಸಿ) ಕಲ್ಲಿದ್ದಲು ಅನಿಲ (ಡಿ) ಮೇಲಿನ ಎಲ್ಲವೂ

ಉತ್ತರ : (ಡಿ) ಮೇಲಿನ ಎಲ್ಲವೂ

**VII.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. **1 X 1 = 1**

**9.** ಜ್ವಲನ ತಾಪ ಎಂದರೇನು?

ಒಂದು ವಸ್ತುವು ಬೆಂಕಿಯಿಂದ ಹೊತ್ತಿಕೊಳ್ಳುವ ಕನಿಷ್ಟ ತಾಪವನ್ನು 'ಜ್ವಲನ ತಾಪ' ಎನ್ನುವರು.

**VIII.** ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. **2 X 2 = 4**

10. ಇತ್ತೀಚೆಗೆ ಹೆಚ್ಚುತ್ತಿರುವ ಇಂಧನಗಳ ಬಳಕೆಯು ಪರಿಸರದ ಮೇಲೆ ದುಷ್ಪರಿಣಾಮಗಳನ್ನು ಉಂಟು ಮಾಡುತ್ತಿದೆ. ಈ ಹೇಳಿಕೆಯನ್ನು ಸಮರ್ಥಿಸಿ.

1. ಕಟ್ಟಿಗೆ, ಕಲ್ಲಿದ್ದಲು, ಪೆಟ್ರೋಲಿಯಂನಂತಹ ಇಂಧನಗಳು ಅದಹ್ಯ ಕಾರ್ಬನ್ ಕಣಗಳನ್ನು ಬಿಡುಗಡೆ ಮಾಡುತ್ತವೆ. ಇವು ಉಸಿರಾಟದ ತೊಂದರೆಗಳನ್ನು ಉಂಟುಮಾಡುತ್ತವೆ.
2. ಇಂಧನಗಳ ಅಪೂರ್ಣ ದಹನದಿಂದ ಕಾರ್ಬನ್ ಮೊನಾಕ್ಸೈಡ್ ಅನಿಲ ಉತ್ಪತ್ತಿಯಾಗುತ್ತದೆ. ಇದು ಬಹಳ ವಿಷಕಾರಿ ಅನಿಲ. ರಕ್ತವನ್ನು ವಿಷಮಯಗೊಳಿಸುತ್ತದೆ.
3. ಇಂಧನಗಳ ದಹನಕ್ರಿಯೆಯು ಪರಿಸರಕ್ಕೆ ಕಾರ್ಬನ್ ಡೈ ಆಕ್ಸೈಡ್‌ನ್ನು ಬಿಡುಗಡೆಗೊಳಿಸುತ್ತದೆ. ಕಾರ್ಬನ್ ಡೈ ಆಕ್ಸೈಡ್ ಹೆಚ್ಚಳ ಜಾಗತಿಕ ತಾಪಕ್ಕೆ ಕಾರಣವಾಗುತ್ತದೆ.
4. ಇಂಧನಗಳ ದಹನದಿಂದ ಬಿಡುಗಡೆಯಾಗುವ ಸಲ್ಫರ್ ಡೈ ಆಕ್ಸೈಡ್ ಹಾಗೂ ನೈಟ್ರೋಜನ್ ಆಕ್ಸೈಡ್‌ಗಳು ಆಮ್ಲಮಳೆ ಬೆಳೆಗಳು, ಕಟ್ಟಡಗಳು ಮತ್ತು ಮಣ್ಣಿಗೆ ಬಹಳ ಹಾನಿಕಾರಕವಾಗಿದೆ.

11. CNG ಮತ್ತು LPG ಗಳನ್ನು ಇಂಧನಗಳಾಗಿ ಬಳಸುವುದರ ಅನುಕೂಲಗಳೇನು?

1. CNG ಮತ್ತು LPG ಗಳನ್ನು ಸುಲಭವಾಗಿ ಕೊಳವೆಗಳ ಮೂಲಕ ಸಾಗಿಸಬಹುದು.
2. CNG ಮತ್ತು LPG ಗಳನ್ನು ಸಾರಿಗೆ ವಾಹನಗಳಿಗೆ ಇಂಧನವಾಗಿ ಉಪಯೋಗಿಸಲಾಗುತ್ತಿದೆ.
3. CNG ಮತ್ತು LPG ಗಳು ಪರಿಶುದ್ಧ ಇಂಧನವಾಗಿವೆ.
4. ಪರಿಸರ ಮಾಲಿನ್ಯ ಉಂಟು ಮಾಡುವುದಿಲ್ಲ. ಪರಿಸರ ಸ್ನೇಹಿ ಆಗಿವೆ.

ಅಥವಾ

ವಾಹನ ಚಲಾಯಿಸುವಾಗ ಪೆಟ್ರೋಲ್ ಮತ್ತು ಡೀಸಲ್ ಹೇಗೆ ಉಳಿಸಬೇಕೆನ್ನುವುದರ ಕುರಿತು ನೀಡುವ ಸಲಹೆ ಯಾವುವು?

1. ಸಾಧ್ಯವಾದಷ್ಟೂ ದೂರ ಸ್ಥಿರವಾದ ಮತ್ತು ಮಿತವಾದ ವೇಗದಲ್ಲಿ ವಾಹನ ಚಲಾಯಿಸುವುದು.
2. ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಅಥವಾ ಯಾವುದಾದರೂ ಸ್ಥಳದಲ್ಲಿ ಕಾಯುವ ಸಂದರ್ಭದಲ್ಲಿ ವಾಹನದ ಎಂಜಿನ್ನನ್ನು ಸ್ಥಗಿತಗೊಳಿಸುವುದು.
3. ಚಕ್ರದಲ್ಲಿನ ಗಾಳಿಯ ಒತ್ತಡ ಸರಿಯಾಗಿರುವುದನ್ನು ಖಚಿತಪಡಿಸಿಕೊಳ್ಳುವುದು.
4. ವಾಹನದ ನಿಯಮಿತ ನಿರ್ವಹಣೆಯನ್ನು ಮಾಡಿಸುವುದು.

**IX.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. **3 X 1 = 3**

12. ಮೇಣದ ಬತ್ತಿಯ ಜ್ವಾಲೆಯ ವಿವಿಧ ವಲಯಗಳನ್ನು ತೋರಿಸುವ ಚಿತ್ರ ಬರೆದು, ಈ ಕೆಳಗಿನ ಭಾಗಗಳನ್ನು ಗುರುತಿಸಿ.
(ಎ) ಅತ್ಯಂತ ಬಿಸಿ ಭಾಗ (ಬಿ) ಅತಿ ಕಡಿಮೆ ಬಿಸಿ ಭಾಗ




**X.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. **4 X 1 = 4**

**13.** ಸುಮಾರು 300 ಮಿಲಿಯನ್ ವರ್ಷಗಳ ಹಿಂದೆ ಭೂಮಿಯು ತಗ್ಗಾದ ತೇವಾಂಶದಿಂದ ಕೂಡಿದ ಪ್ರದೇಶಗಳಲ್ಲಿ ದಟ್ಟವಾದ ಅರಣ್ಯಗಳನ್ನು ಹೊಂದಿತ್ತು. ಪ್ರವಾಹದಂತಹ ನೈಸರ್ಗಿಕ ಪ್ರಕ್ರಿಯೆಗಳಿಂದ ಈ ಅರಣ್ಯಗಳು ಮಣ್ಣಿನ ಅಡಿಯಲ್ಲಿ ಹೂತು ಹೋದವು. ಅವುಗಳ ಮೇಲೆ ಹೆಚ್ಚು ಮಣ್ಣು ಸಂಗ್ರಹವಾದಂತೆ, ಅವು ಸಂಪೀಡನೆಗೊಳಗಾದವು. ಅವು ಹೆಚ್ಚು ಹೆಚ್ಚು ಆಳಕ್ಕೆ ಹೂತುಹೋಗುತ್ತಿದ್ದಂತೇ ತಾಪವೂ ಹೆಚ್ಚಾಯಿತು. ಸತ್ತ ಸಸ್ಯಗಳು ಅಧಿಕ ಒತ್ತಡ ಮತ್ತು ಅಧಿಕ ತಾಪದಲ್ಲಿ, ನಿಧಾನವಾಗಿ ಕಲ್ಲಿದ್ದಲಾಗಿ ಪರಿವರ್ತನೆಗೊಂಡವು.

ಅಥವಾ

ಪೆಟ್ರೋಲಿಯಂ ಹೇಗೆ ಉಂಟಾಗುತ್ತದೆ? ವಿವರಿಸಿ

ಸಮುದ್ರದಲ್ಲಿ ವಾಸಿಸುವ ಜೀವಿಗಳಿಂದ ಪೆಟ್ರೋಲಿಯಂ ಉಂಟಾಗಿದೆ. ಸಮುದ್ರ ಜೀವಿಗಳು ಸತ್ತಾಗ ಅವುಗಳ ದೇಹಗಳು ಸಮುದ್ರದ ತಳವನ್ನು ಸೇರುತ್ತವೆ ಮತ್ತು ಮರಳು ಹಾಗೂ ಜೇಡಿಮಣ್ಣಿನ ಪದರಗಳಿಂದ ಆವರಿಸಲ್ಪಡುತ್ತವೆ. ಗಾಳಿಯ ಅನುಪಸ್ಥಿತಿ, ಅಧಿಕ ತಾಪ ಮತ್ತು ಅಧಿಕ ಒತ್ತಡ ಮಿಲಿಯನ್‌ಗಟ್ಟಲೆ ವರ್ಷಗಳ ಅವಧಿಯಲ್ಲಿ ಸತ್ತ ಜೀವಿಗಳನ್ನು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲವಾಗಿ ಉಂಟಾಗುತ್ತವೆ.

## –: ಜೀವ ವಿಜ್ಞಾನ :–

**XI.** ಈ ಕೆಳಗಿನ ಪ್ರಶ್ನೆಗೆ ನಾಲ್ಕು ಆಯ್ಕೆ ನೀಡಲಾಗಿದೆ. ಸರಿಯಾದ ಉತ್ತರ ಆರಿಸಿ ಬರೆಯಿರಿ. **1 X 1 = 1**

**14.** ಸಕ್ಕರೆಯನ್ನು ಆಲ್ಕೋಹಾಲ್ ಆಗಿ ಪರಿವರ್ತಿಸುವ ಕ್ರಿಯೆ
(ಎ) ಪಾಶ್ಚರೀಕರಣ (ಬಿ) ಪ್ರತಿರಕ್ಷಣೆ (ಸಿ) ಹುದುಗುವಿಕೆ (ಡಿ) ಪ್ರತಿಜೈವಿಕಗಳು
ಉತ್ತರ : (ಸಿ) ಹುದುಗುವಿಕೆ

**XII.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿರಿ. **1 X 1 = 1**

**15.** ಕಳೆಗಳು ಎಂದರೇನು?
ಒಂದು ಜಮೀನಿನಲ್ಲಿ ಬೆಳೆಯ ಜೊತೆಗೆ ಬೆಳೆಯುವ ಅನಪೇಕ್ಷಿತ ಸಸ್ಯಗಳನ್ನು ಕಳೆಗಳು ಎನ್ನುವರು.

**XIII.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. **2 X 2 = 4**

**16.** ಸಾವಯವ ಗೊಬ್ಬರದ ಅನುಕೂಲತೆಗಳನ್ನು ತಿಳಿಸಿ.
ಸಾವಯವ ಗೊಬ್ಬರಗಳು ನೀರನ್ನು ಹಿಡಿದಿಡುವ ಮಣ್ಣಿನ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.
ಸಾವಯವ ಗೊಬ್ಬರಗಳು ಮಣ್ಣನ್ನು ರಂಧ್ರಯುಕ್ತವಾಗಿಸುತ್ತದೆ. ಇದರಿಂದಾಗಿ, ಅನಿಲಗಳ ವಿನಿಮಯವು ಸುಲಭವಾಗುತ್ತದೆ.
ಸಾವಯವ ಗೊಬ್ಬರಗಳು ಉಪಯುಕ್ತ ಸೂಕ್ಷ್ಮಜೀವಿಗಳ ಸಂಖ್ಯೆಯನ್ನು ಹೆಚ್ಚಿಸುತ್ತದೆ.
ಸಾವಯವ ಗೊಬ್ಬರಗಳು ಮಣ್ಣಿನ ಸಂರಚನೆಯನ್ನು ಸುಧಾರಿಸುತ್ತದೆ.

ಅಥವಾ

ಕೃಷಿ ಪದ್ಧತಿಯ ಹಂತಗಳನ್ನು ತಿಳಿಸಿ.
(1) ಮಣ್ಣನ್ನು ಹದಗೊಳಿಸುವಿಕೆ
(2) ಬಿತ್ತನೆ
(3) ಸಾವಯವ ಗೊಬ್ಬರಗಳು ಮತ್ತು ರಸಗೊಬ್ಬರಗಳನ್ನು ಸೇರಿಸುವುದು
(4) ನೀರಾವರಿ
(5) ಕಳೆಗಳಿಂದ ರಕ್ಷಣೆ
(6) ಕೊಯ್ಲು
(7) ಸಂಗ್ರಹಣೆ

17. ವ್ಯಕ್ತಿಯೊಬ್ಬ ಸಂಪರ್ಕದಿಂದ ಹರಡುವ ರೋಗವೊಂದರಿಂದ ಬಳಲುತ್ತಿದ್ದಾನೆ. ಸೋಂಕಿತ ವ್ಯಕ್ತಿಯಿಂದ ಆರೋಗ್ಯವಂತ ವ್ಯಕ್ತಿಗೆ ಆ ರೋಗ ಹರಡದಂತೆ ತಡೆಗಟ್ಟಲು ಅನುಸರಿಸುವ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿ.

1. ಸೋಂಕಿತ ವ್ಯಕ್ತಿಯ ಸಂಪರ್ಕದಿಂದ ದೂರ ಇರುವುದು.
2. ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು.
3. ಮಾಸ್ಕ್ ಧರಿಸುವುದು.
4. ಸೋಂಕಿತ ವ್ಯಕ್ತಿ ಬಳಸಿದ ಆಹಾರ, ಬಟ್ಟೆ ಬಳಸದಿರುವುದು.
5. ಸೋಂಕಿತ ವ್ಯಕ್ತಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡುವುದು.

**XIV.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. **3 X 1 = 3**

18. ಎಡೆಕುಂಟೆಯ ಚಿತ್ರ ಬರೆದು, ಈ ಕೆಳಗಿನ ಭಾಗಗಳನ್ನು ಗುರುತಿಸಿ.

(ಎ) ನೊಗ (ಬಿ) ಬಾಗಿದ ತಟ್ಟೆ




**XV.** ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. **4 X 1 = 4**

19. (ಎ) ನಮ್ಮ ಜೀವನದಲ್ಲಿ, ಸೂಕ್ಷ್ಮಜೀವಿಗಳ ನಾಲ್ಕು ಉಪಯೋಗಗಳನ್ನು ತಿಳಿಸಿ.

1. ಲ್ಯಾಕ್ಟೋಬ್ಯಾಸಿಲಸ್ ಬ್ಯಾಕ್ಟೀರಿಯಾ ಹಾಲು ಮೊಸರು ಆಗಲು ಸಹಾಯ ಮಾಡುತ್ತದೆ.
2. ಅಕ್ಕಿ ಇಡ್ಲಿ ಮತ್ತು ದೋಸೆ ಹಿಟ್ಟು ಹುದುಗುವಿಕೆಗೆ ಕೂಡಾ ಬ್ಯಾಕ್ಟೀರಿಯಾ ಮತ್ತು ಯೀಸ್ಟ್‌ಗಳು ಸಹಕಾರಿಯಾಗಿವೆ.
3. ಬ್ರೆಡ್, ಪೇಸ್ಟ್ರಿ ಮತ್ತು ಕೇಕ್ ತಯಾರಿಸಲು ಯೀಸ್ಟ್ ಬಳಸುತ್ತಾರೆ
4. ಸೂಕ್ಷ್ಮಜೀವಿಗಳು ಪರಿಸರದ ಸ್ವಚ್ಛಕಾರಿಗಳು. ಬ್ಯಾಕ್ಟೀರಿಯಾಗಳು ಸಾವಯವ ತ್ಯಾಜ್ಯಗಳನ್ನು ವಿಘಟಿಸುತ್ತವೆ.
5. ಸೂಕ್ಷ್ಮಜೀವಿಗಳನ್ನು ಔಷಧಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ.
6. ಹಲವಾರು ಪ್ರತಿಜೈವಿಕಗಳನ್ನು ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರಗಳಿಂದ ಉತ್ಪಾದಿಸಲಾಗುತ್ತಿದೆ. ಸಾಮಾನ್ಯವಾಗಿ ತಿಳಿದಿರುವ ಕೆಲವು ಪ್ರತಿಜೈವಿಕಗಳಾದ ಸ್ಟ್ರೆಪ್ಟೋಮೈಸಿನ್, ಟೆಟ್ರಾಸೈಕ್ಲಿನ್ ಮತ್ತು ಎರಿಥ್ರೋಮೈಸಿನ್‌ಗಳನ್ನು ಶಿಲೀಂಧ್ರ ಮತ್ತು ಬ್ಯಾಕ್ಟೀರಿಯಾಗಳಿಂದ ತಯಾರಿಸಲಾಗುತ್ತದೆ.
7. ಹಲವಾರು ರೋಗಗಳ ವಿರುದ್ಧ ನಮ್ಮನ್ನು ರಕ್ಷಿಸಿಕೊಳ್ಳಲು ನೀಡುವ ಚುಚ್ಚುಮದ್ದು(ಲಸಿಕೆಗಳು)ಗಳನ್ನು ತಯಾರಿಸಲು ಸೂಕ್ಷ್ಮಜೀವಿಗಳನ್ನು ಬಳಸಲಾಗುತ್ತದೆ
8. ಕೆಲವು ಸೂಕ್ಷ್ಮಜೀವಿಗಳು ನೈಟ್ರೋಜನ್ ಅನ್ನು ಸ್ಥಿರೀಕರಿಸಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತವೆ.
9. ಯೀಸ್ಟ್ ಅನ್ನು ಮದ್ಯ ಮತ್ತು ವೈನ್‌ನ ವಾಣಿಜ್ಯ ಉತ್ಪಾದನೆಯಲ್ಲಿ ಬಳಸಲಾಗುತ್ತದೆ.
10. ಕೃಷಿಯಲ್ಲಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತವೆ.

(ಬಿ) ಸೂಕ್ಷ್ಮಜೀವಿಗಳಿಂದ ಉಂಟಾಗುವ ನಾಲ್ಕು ಹಾನಿಗಳನ್ನು ತಿಳಿಸಿ.

1. ಕೆಲವು ಸೂಕ್ಷ್ಮಜೀವಿಗಳು ಮನುಷ್ಯರಲ್ಲಿ, ಸಸ್ಯಗಳಲ್ಲಿ ಮತ್ತು ಪ್ರಾಣಿಗಳಲ್ಲಿ ರೋಗಗಳನ್ನು ಉಂಟುಮಾಡುತ್ತವೆ.
2. ಸೂಕ್ಷ್ಮಜೀವಿಗಳು ಸೋಂಕಿತ ವ್ಯಕ್ತಿಯಿಂದ ಆರೋಗ್ಯವಂತ ವ್ಯಕ್ತಿಗೆ ಗಾಳಿ, ನೀರು, ಆಹಾರ ಅಥವಾ ದೈಹಿಕ ಸಂಪರ್ಕದ ಮೂಲಕ ರೋಗಗಳನ್ನು ಹರಡುತ್ತವೆ.
   ಉದಾಹರಣೆಗಳೆಂದರೆ, ಕಾಲರಾ, ಸಾಮಾನ್ಯಶೀತ, ಚಿಕನ್‌ಪಾಕ್ಸ್ (ಸೀತಾಳೆ ಸಿಡುಬು) ಮತ್ತು ಕ್ಷಯರೋಗ.
3. ಕೆಲವು ಸೂಕ್ಷ್ಮಜೀವಿಗಳು ಆಹಾರ, ಬಟ್ಟೆ ಮತ್ತು ಚರ್ಮದ ವಸ್ತುಗಳನ್ನು ಹಾಳುಮಾಡುತ್ತವೆ.
4. ನಮ್ಮ ಆಹಾರದ ಮೇಲೆ ಕೆಲವು ಸೂಕ್ಷ್ಮಜೀವಿಗಳು ಬೆಳೆಯುತ್ತವೆ ಮತ್ತು ಆಹಾರವನ್ನು ವಿಷಯುಕ್ತವಾಗಿ ಮಾಡುವುದರ ಮೂಲಕ ಗಂಭೀರವಾದ ಕಾಯಿಲೆಯನ್ನು ಹಾಗೂ ಸಾವನ್ನು ಕೂಡಾ ಉಂಟು ಮಾಡುತ್ತವೆ.

**ALL THE BEST**